L 111

**ಮೊದಲನೆಯ ಬಿ. ಎ./ಬಿ.ಕಾಂ. ಪರೀಕ್ಷೆ, ಮೇ/ಜೂನ್ 2010**
**(Revised SIM Scheme)**
**ಕನ್ನಡ ಭಾಷೆ : ಪತ್ರಿಕೆ - ೧**
**ಸವಿಸ್ತರ ಮತ್ತು ಅವಿಸ್ತರ ಪಠ್ಯಗಳು**
**(ಹೊಸಗನ್ನಡ ಕವಿತೆಗಳು, ಶೂದ್ರ ತಪಸ್ವಿ, ಬೆಟ್ಟದ ಜೀವ, ಆಡಳಿತ ಕನ್ನಡ)**

ಸಮಯ : 3 ಗಂಟೆಗಳು ಗರಿಷ್ಠಾಂಕ : 90

**ಎ - ವಿಭಾಗ**

1. **ಒಂದರ** ಭಾವವನ್ನು ಸಂದರ್ಭ ಸಹಿತ ವಿವರಿಸಿ : **5**

1.1) ವಿಜೃಂಭಿಸಿತು ರಾಮಬಾಣ ; ನಿಜ ಕತ್ತಲಿಗೆ
ಹತ್ತೆತಲೆ ? ನೂರಾರೆ ? ಅದು ಅಸಂಖ್ಯ
ಕತ್ತರಿಸಿದರೆ ಬೆಳೆವ, ಬೆಳೆದು ಕತ್ತಿಗೆ ಬರುವ
ಅನಾದಿ ; ಕೋದಂಡ ದಂಡವೂ ಹೀಗೆ ದಂಡ.

1.2) ನಾನಾವ ಪಾಪಮನ್ ಎಸಗಿದುದೆನೆಗೆ ನೆನಪಿಲ್ಲ,
ಎಂದುಮ್ ಅನೃತವನೊರೆದೆನಿಲ್ಲ.
ಮೇಣ್ ಹಿಂಸೆಯಂ ಗೆಯ್ದೆನಿಲ್ಲಾವ ಜೀವಿಗಂ.
ಮತ್ತಾರ ದುಷ್ಕೃತಕಿಂದು ಕೊಲೆವೋದುದೆನ್ನ ಶಿಶು ?

2. 2.1) **ಆರು** ಪದಗಳಿಗೆ ಅರ್ಥ ಬರೆಯಿರಿ : **(½×6=3)**
ನಗ, ಮಾಡ, ಗೃಧ್ರ, ಕಾನನ, ಸೊಣಗ, ಪುಚ್ಛ, ಕೃಪಾಣು, ಪೊಣ್ಕೆ, ವಲ್ಮೀಕ, ಅರಿ.

2.2) **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ : **(2×2=4)**

2.1) ವೈದೇಹಿ

2.2) ನವೋದಯ ಕಾವ್ಯ

2.3) ಮೃತ್ಯು ದೇವತೆ.

3. **ನಾಲ್ಕರ** ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ : **(2×4=8)**
(ಪ್ರತಿ ಪಠ್ಯದಿಂದ **ಎರಡಕ್ಕಿಂತ** ಹೆಚ್ಚು ಉತ್ತರಿಸಬಾರದು)

3.1) ಬಡವರ ಸಿಟ್ಟಿದು ಏನು ಪಿಶಾಚಿ ! ಬಡಬಾಗ್ನಿಯ ತಲೆತಗ್ಗಿತು ನಾಚಿ !

3.2) ಬೆಳೆಯುವ ಪೈರು ಭಾದ್ರಪದದೊಳೆ ಸುಟ್ಟುಹೋಯಿತು.

**ಪು.ತಿ.ನೋ.**

3.3) ಇವರು ಬಾಯಿ ಬಿಟ್ಟೊಡನೆ ಅವರ ಬಾಯಿ ಕಟ್ಟಿತು.

3.4) ಕರುಣೆ ಒಲುಮೆಗೆ ಸಾಟಿಯೆ ?

3.5) ಪೆಸರ ಭೀತಿಗೆ ಬೆಚ್ಚಿ ಕಂಪಿಪುದೊ ಮೂಜಗಂ !

3.6) ರಾಮರಾಜ್ಯದೊಳ್ ಅಧರ್ಮಮೆ ಮೃತ್ಯು.

3.7) ನಮಸ್ಕಾರಮೆ ಪುಣ್ಯಂ ; ತಿರಸ್ಕಾರಮೆ ಪಾಪಂ !

3.8) ಕರು ಕಳಿದ ಹಸುವ ಹಾಲ್ ಕರೆವ ಗೌಳಿಗನಂತೆ.

### ಬಿ – ವಿಭಾಗ

4. 4.1) 'ಕುರಿಗಳು ಸಾರ್ ಕುರಿಗಳು' ಕವನದಲ್ಲಿ ರಾಜಕಾರಣಿಗಳು ಮತ್ತು ಜನರ ನಡೆವಳಿಕೆಗಳನ್ನು ಹೇಗೆ ವಿಡಂಬಿಸಲಾಗಿದೆ ? ವಿಶ್ಲೇಷಿಸಿ. **10**

**ಅಥವಾ**

ಮಹಾನಗರಗಳಲ್ಲಿ ವಾಸಿಸುವ ಜನತೆಯ ಯಾಂತ್ರಿಕ ಮತ್ತು ಸಂಕೀರ್ಣ ಜೀವನವನ್ನು 'ಮುಂಬೈ ಜಾತಕ' ಕವನದಲ್ಲಿ ಕವಿ ಹೇಗೆ ವ್ಯಕ್ತಪಡಿಸಿದ್ದಾರೆ ?

4.2) **ಒಂದನ್ನು** ಕುರಿತು ಬರೆಯಿರಿ : **5**

೧) 'ಪ್ರಾರ್ಥನೆ' ಕವನದ ಸ್ವಾರಸ್ಯ.

೨) 'ಸಾವಿರಾರು ನದಿಗಳು' ಕವಿತೆಯ ಆಶಯ.

5. 5.1) 'ಶೂದ್ರತಪಸ್ವಿ' ನಾಟಕದಲ್ಲಿ ಶ್ರೀರಾಮನ ದರ್ಶನದ ಮಹತ್ವವನ್ನು ವಿವರಿಸಿ. **10**

**ಅಥವಾ**

ಶ್ರೀರಾಮ ಮತ್ತು ಬ್ರಾಹ್ಮಣರ ನಡುವೆ ನಡೆಯುವ ಸಂಭಾಷಣೆಯ ಸ್ವಾರಸ್ಯವನ್ನು ಕುರಿತು ಬರೆಯಿರಿ.

5.2) **ಒಂದನ್ನು** ಕುರಿತು ಬರೆಯಿರಿ : **5**

೧) ವೃಕ್ಷ ಭೈರವನ ಪಾತ್ರ

೨) ಶೂದ್ರ ತಪಸ್ವಿ ನಾಟಕದ ಶೈಲಿ.

### ಸಿ – ವಿಭಾಗ

6. 6.1) "ಬೆಟ್ಟದ ಜೀವ ಕಾದಂಬರಿಯಲ್ಲಿ ಗೋಪಾಲಯ್ಯ ಗ್ರಾಮೀಣ ಸಂಸ್ಕೃತಿಯ ವಕ್ತಾರನಂತೆಯೂ ಶಂಭು ಭಟ್ಟ ನಗರ ಸಂಸ್ಕೃತಿಯ ವಕ್ತಾರನಂತೆಯೂ ಕಂಡು ಬರುತ್ತಾರೆ" – ವಿವರಿಸಿ. **10**

**ಅಥವಾ**

ಶಿವರಾಮಯ್ಯ, ಶಂಕರಮ್ಮ, ನಾರಾಯಣ ಭಟ್ಟ – ಇವರಲ್ಲಿ ಇಬ್ಬರ ಪಾತ್ರವನ್ನು ಪರಿಚಯಿಸಿ.

6.2) **ಎರಡನ್ನು** ಕುರಿತು ಬರೆಯಿರಿ : **(5×2=10)**

೧) ಮಲೆನಾಡಿನ ಸ್ನಾನದ ಅನುಭವ

೨) ಹುಲಿ ಬೇಟೆ ಪ್ರಸಂಗ

೩) ಶಿವರಾಮ ಕಾರಂತ.

7. 7.1) ಆಡಳಿತ ಕನ್ನಡ ನಡೆದು ಬಂದ ದಾರಿಯನ್ನು ಕುರಿತು ವಿವರಿಸಿ. **10**

**ಅಥವಾ**

ಅರೆ ಸರ್ಕಾರಿ ಪತ್ರ ಎಂದರೇನು ? ಬರೆಯುವ ಸಂದರ್ಭಗಳಾವುವು ? ಮಾದರಿ ಪತ್ರದೊಡನೆ ವಿವರಿಸಿ.

7.2) **ಎರಡನ್ನು** ಕುರಿತು ಬರೆಯಿರಿ : **(5×2=10)**

೧) ಸುತ್ತೋಲೆ

೨) ಪ್ರಮಾಣ ಪತ್ರ

೩) ಜಾಹೀರಾತು

೪) ಕಛೇರಿ ಟಿಪ್ಪಣಿಗಳು.

---